Houses constructed for Harijans and Girijans in South Kanara District.

703. SRI A. RAMACHANDRA (Sullia).—Will the Minister of State for Housing be pleased to state:—

(a) the number os houses constructed by the Government for the Harijans/Girijans of Mangalore District ;

(b) out of them, the number of houses which have collapsed ;

(c) the expenditure incurred for each house ?

SRI B. SUBBAIAH SETTY (Minister for Education) [On behelf of Sri P. F. Rodrigues (Minister of State for Housing)]

(a) There is no district by name Mangalore in Karnataka State. But there is a District called South Kanara. In this District the Government have constructed 2,000 houses for the Harijan/ Girijans.

(b) 13-houses.

(c) The expendituee incurred by the Government :
(1) Rs. 2,000 for Janatha House.
(2) Rs. 1,250 for low cost House.

ಶ್ರೀ ಎ. ರಾಮಚಂದ್ರ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಹರಿಜನ-ಗಿರಿಜನರಿಗೆ ಮನೆಗಳನ್ನು ಕಟ್ಟಿ ಕೊಟ್ಟಿದ್ದಾರೆಂದು ಕೇಳಿದ್ದೇನೆ. ಅದಕ್ಕೆ ಉತ್ತರ ಕೊಡುವಾಗ ಕರ್ನಾಟಕ ರಾಜ್ಯದಲ್ಲಿ ಮಂಗಳೂರು ಜಿಲ್ಲೆ ಎಂಬುದು ಇಲ್ಲ. ಆದರೆ ದಕ್ಷಿಣ ಕನ್ನಡ ಜಿಲ್ಲೆ ಎಂಬುದು ಇದೆ. ಎಂಬುದಾಗಿ ಹೇಳಿದ್ದೀರಿ. ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ೧೩ ಮನೆಗಳು ಬಿದ್ದುಹೋಗಿವೆ ಎಂಬುದಾಗಿ ಹೇಳಿದ್ದೀರಿ. ಈ ೧೩ ಮನೆಗಳು ಯಾವ ತಾಲ್ಲೂಕಿನಲ್ಲಿ ? ಯಾವ ಯಾವ ಗ್ರಾಮದಲ್ಲಿ ಬಿದ್ದುಹೋಗಿದೆ ಎಂಬುದನ್ನು ಹೇಳುವುದ ಕ್ಕಾಗುತ್ತದೆಯೆ ?

† ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಮಂಗಳೂರು ಜಿಲ್ಲೆ ಎಂಬುದು ಇಲ್ಲ. ತಮ್ಮ ಪ್ರಶ್ನೆಯಲ್ಲಿ ಮಂಗಳೂರು ಜಿಲ್ಲೆಯಲ್ಲಿ ಎಂಬುದಾಗಿ ಕೇಳಿದ್ದಕ್ಕೆ ಇಲ್ಲ ಎಂಬುದಾಗಿ ಹೇಳಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಅಲ್ಲವೆಂದು ಕರೆಕ್ಷನ್ ಮಾಡಿದ್ದೇವೆ.

ಶ್ರೀ ಎ. ರಾಮಚಂದ್ರ.—ನಾನು ಮಂಗಳೂರು ಜಿಲ್ಲೆ ಎಂಬುದಾಗಿ ಕೇಳಲಿಲ್ಲ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಪ್ರಶ್ನೆಯಲ್ಲಿ ಹಾಗೆ ಇದೆ.

ಶ್ರೀ ಬಿ. ವಿ. ಕಕ್ಕಿಲಾಯ.— ಸೌತ್ ಕೆನರಾ ಎಂಬುದಾಗಿ ಹೇಳುವುದೂ ತಪ್ಪು, ಈಗ ಅದನ್ನು ದಕ್ಷಿಣ ಕನ್ನಡ ಜಿಲ್ಲೆ ಎಂಬುದಾಗಿ ಮಾಡಿದ್ದಾರೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಇದರಲ್ಲಿ ಮಂಗಳೂರು ತಾಲ್ಲೂಕಿನಲ್ಲಿ ೪ ಮನೆಗಳು ಬಿದ್ದುಹೋಗಿವೆ ಸೂಳ್ಯ ತಾಲ್ಲೂಕಿನಲ್ಲಿ ೩ ಮನೆಗಳು ಬಿದ್ದು ಹೋಗಿವೆ. ಉಡುಪಿ ತಾಲ್ಲೂಕಿನಲ್ಲಿ ೪ ಮನೆಗಳು ಬಿದ್ದು ಹೋಗಿವೆ. ಮತ್ತು ಪುತ್ತೂರು ತಾಲ್ಲೂಕಿನಲ್ಲಿ ೨ ಮನೆಗಳು ಬಿದ್ದು ಹೋಗಿವೆ, ಒಟ್ಟು ೧೩ ಮನೆಗಳು ಬಿದ್ದು ಹೋಗಿವೆ.

ಶ್ರೀ ಎ. ರಾಮಚಂದ್ರ.—ಸೂಳ್ಯ ತಾಲೂಕಿನಲ್ಲಿ ೩ ಮನೆಗಳು ಬಿದ್ದು ಹೋಗಿವೆ ಎಂಬುದಾಗಿ ಹೇಳಿದ್ದೀರಿ, ಬಹುಶ: ನನಗೆ ತಿಳಿದ ಹಾಗೆ ಅಜ್ಜಾವರ ಗ್ರಾಮ ಒಂದರಲ್ಲೇ ೧೧ ಮನೆಗಳು ಬಿದ್ದು ಹೋಗಿವೆ ಎಂಬುದಾಗಿ ನನಗೆ ವರ್ತಮಾನ ಬಂದಿದೆ. ತಮಗೇನಾದರೂ ಆ ಬಗ್ಗೆ ವರ್ತಮಾನ ಬಂದಿದೆಯೇ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಆಜ್ಞಾವರ ಗ್ರಾಮದಲ್ಲಿ ಬಿದ್ದಿವೆಯೆಂದು ತಾವು ಹೇಳಿದ್ದೀರಿ. ಊರಿನಲ್ಲಿ ಕಟ್ಟಿರುವ ಬೇರೆ ಮನೆಗಳೂ ಇರಬಹುದಂ. ನವಂಗೆ ಸಿಕ್ಕಿದ ಮಾಹಿತಿ ಪ್ರಕಾರ ಮೂರು ಮನೆಗಳು ಬಿದ್ದು ಹೋಗಿವೆ.

ಶ್ರೀ ಕೆ. ರಾಮಭಟ್.— ತಾವು ಕೊಟ್ಟಿರುವ ಅಂಕಿ ಅಂಶಗಳು ಯಾವ ಇಸವಿಯಿಂದ–ಯಾವ ತಾರೀಖಿನವರೆಗೆ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಮನೆಗಳನ್ನು ಕಟ್ಟಿದ ಮೇಲಿನಿಂದ ಇಷ್ಟರತನಕ.

ಶ್ರೀ ಬಿ. ವಿ. ಕಕ್ಕಿಲಾಯ —ಸರ್ಕಾರದವರು ಮನೆಗಳನ್ನು ಕಟ್ಟುವುದಕ್ಕೆ ಎರಡು ಯೋಜನೆಗಳಲ್ಲಿ ಕಟ್ಟಿಸಿಕೊಡುತ್ತಿದ್ದಾರೆ. ಒಂದು ೨ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಮನೆಗಳನ್ನು ಕಟ್ಟಿ ತಕ್ಕಂಥಾದ್ದು. ಎರಡನೆಯದು ೧,೨೫೦ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿತಕ್ಕಂಥದ್ದು. ಆದರೆ ತಾವು ೧೩ ಮನೆಗಳು ಬಿದ್ದು ಹೋಗಿವೆ ಎಂಬುದಾಗಿ ಹೇಳಿದ್ದೀರಿ. ಇದರಲ್ಲಿ ೨ ಸಾವಿರ ರೂಪಾಯಿ ಖರ್ಚು ಮಾಡಿ ಜನತಾ ಗೃಹ ನಿರ್ಮಾಣ ಯೋಜನೆಯಲ್ಲಿ ಕಟ್ಟಿರುವಂಥಹ ಮನೆಗಳಲ್ಲಿ ಬಿದ್ದು ಹೋಗಿರುವುದೆಷ್ಟು ? ೧,೨೫೦ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿರುವಂತಹ ಮನೆಗಳಲ್ಲಿ ಬಿದ್ದು ಹೋಗಿರುವುದೆಷ್ಟು ? ತಿಳಿಸುತ್ತೀರಾ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.— ಜನತಾ ಯೋಜನೆ ಮನೆಗಳಲ್ಲಿ ೧೨ ಮತ್ತು ಲೋ ಕಾಸ್ಟ್ ಹೌಸಸ್ ೧.

Pay Scales for Doctors possessing B. S. A. M. Qualification

796. SRI K. VENKATARAMAIAH (Hosadurga).—Will the Minister for Health and Family Welfare be pleased to state :—

(a) the persent pay of the doctors working with B.S.A.M. educational qualifications ;

(b) the difficulties of the Government paying the scales of pay recommended by Dr. Melakote Committee ?

SRI M. MALLAPPA (Minister for Health and Family Welfare).—

(a) The Doctors working with the B. S. A. M. qualification are drawing the minimum in the following pay scales.—

(1) Rs. 660-30-750-60-1000-60-1300 (Junior Physicians)

(2) Rs. 750-60-1000-60-1300-75-1525 (Lecturers).

(b) Even though the Melkote's report is accepted in principle by the Government the pay scales recommended for the various categories by the Pay Commissions appointed by the Government from time to time are being paid to them.

ಶ್ರೀ ಕೆ. ವೆಂಕಟರಾಮಯ್ಯ —ಬಿ. ಎಸ್. ಎ. ಎಂ. ವಿದ್ಯಾರ್ಹತೆ ಪಡೆದು ಕೆಲಸ ಮಾಡುತ್ತಿರುವ ಡಾಕ್ಟರುಗಳಿಗೆ ೬೬೦-೩೦-೭೫೦-೬೦-೧೦೦೦-೬೦-೧೩೦೦ ಎಂಬುದಾಗಿ ನಿಗದಿ ಮಾಡಿದ್ದೀರಿ. ಆದರೆ ಬಿ.ಎಸ್.ಎ.ಎಂ. ಡಿಪ್ಲೋಮದಾರರಿಗೆ ಎಷ್ಟು ನಿಗದಿ ಮಾಡಿದ್ದೀರಿ ?

† ಶ್ರೀ ಎಂ. ಮಲ್ಲಪ್ಪ.—ಆ ಪ್ರಶ್ನೆಯನ್ನು ತಾವು ಕೇಳಿಲ್ಲ. ಆದಕ್ಕೆ ತಾವು ಬೇರೆ ಪ್ರಶ್ನೆ ಕೇಳಿ. ಅದಕ್ಕೆ ಉತ್ತರ ಒದಗಿಸಿಕೊಡುತ್ತೇನೆ.